ಅನೌಪಚಾರಿಕ ಸಭೆ ನಡೆಸಿ ಆಡಳಿತ ಯಂತ್ರಕ್ಕೆ ಚುರುಕು ಮುಟ್ಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

# ನೀತಿ ಸಂಹಿತೆ ಬಳಿಕ ಅಭಿವೃದ್ಧಿಗೆ ವೇಗ

**ಬರ ಪರಿಹಾರ, ಮುಂಗಾರು ಸಿದ್ಧತೆ ಪರಿಶೀಲನೆ | ಶಾಸಕರ ಅನುದಾನ ಬಿಡುಗಡೆಗೆ ಸೂಚನೆ**

**ಬಜೆಟ್ ಕಾರ್ಯಕ್ರಮ ಟೆಂಡರ್‌ಗೆ ಸಿದ್ಧತೆ | ಜನಸ್ಪಂದನ ಅರ್ಜಿ ವಿಲೇವಾರಿಗೆ ಗಡುವು**

■ **ವಿಕ ಸುದ್ದಿಲೋಕ** ಬೆಂಗಳೂರು



ಚುನಾವಣಾ ನೀತಿ ಸಂಹಿತೆ ನಡುವೆಯೂ ಬರ ಪರಿಹಾರ, ಮುಂಗಾರು ಸಿದ್ಧತೆ ಹಾಗೂ ಅಭಿವೃದ್ಧಿ ಕೆಲಸಗಳ ಕುರಿತಂತೆ ಅಧಿಕಾರಿಗಳಿಂದ ಮಾಹಿತಿ ಪಡೆದಿರುವ ಸಿಎಂ ಸಿದ್ದರಾಮಯ್ಯ ಅವರು, ಜೂನ್ ಮೊದಲ ವಾರದಲ್ಲಿ ನೀತಿ ಸಂಹಿತೆ ಮುಗಿಯುತ್ತಿದ್ದಂತೆ ಶಾಸಕರ ಸ್ಥಳೀಯ ಕ್ಷೇತ್ರಾಭಿವೃದ್ಧಿ ನಿಧಿಯಡಿ ಅನುದಾನ ಬಿಡುಗಡೆ ಮಾಡಬೇಕು, ಬಜೆಟ್ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಪೂರ್ಣ ತಯಾರಿ ಮಾಡಿಕೊಳ್ಳಬೇಕು ಎಂದು ನಿರ್ದೇಶನ ನೀಡಿದ್ದಾರೆ.

ಮುಖ್ಯಮಂತ್ರಿಗಳು ಶುಕ್ರವಾರ ವಿಧಾನಸೌಧದಲ್ಲಿ ನಾನಾ ಇಲಾಖೆ ಹಿರಿಯ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಡಿಸಿಎಂ ಹಾಗೂ ಸಚಿವರು ಈ ಅನೌಪಚಾರಿಕ ಸಭೆಯಲ್ಲಿ ಪಾಲ್ಗೊಂಡರು.

ಜನಸ್ಪಂದನ ಅರ್ಜಿ ವಿಲೇವಾರಿಗೆ ಸಕಾಲದಲ್ಲಿ ಕ್ರಮ ಕೈಗೊಳ್ಳಬೇಕು. ಬಾಕಿಯಿರುವ ಅರ್ಜಿಗಳನ್ನು ತಿಂಗಳಾಂತ್ಯದಲ್ಲಿ ಇತ್ಯರ್ಥ ಪಡಿಸುವಂತೆ ಗಡುವು ವಿಧಿಸಿದರು.

**ಅನುದಾನ ಬಿಡುಗಡೆಗೆ ಕ್ರಮ**

ನೀತಿ ಸಂಹಿತೆ ಮುಗಿಯುತ್ತಿದ್ದಂತೆ ಶಾಸಕರ ಸ್ಥಳೀಯ ಕ್ಷೇತ್ರಾಭಿವೃದ್ಧಿ ಅನುದಾನ ಬಿಡುಗಡೆಗೆ ಅಗತ್ಯ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸಿಎಂ ನಿರ್ದೇಶನ ನೀಡಿದರು. 'ಗ್ಯಾರಂಟಿ'ಗಳ ಹೆಸರಿನಲ್ಲಿ ಕ್ಷೇತ್ರದ ಅಭಿವೃದ್ಧಿ ಕೆಲಸಗಳಿಗೆ ಅನುದಾನ ಸಿಗುತ್ತಿಲ್ಲ ಎಂಬ ಅಸಮಾಧಾನ ಶಾಸಕರಲ್ಲಿದೆ. ಪಕ್ಷದ ಶಾಸಕರೂ ನೇರವಾಗಿ ಈ ಕುರಿತು ಅಸಮಾಧಾನ ಹೊರಹಾಕುತ್ತಿರುವ ಹಿನ್ನೆಲೆಯಲ್ಲಿ ಇದನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ಪಕ್ಷದ ಶಾಸಕರಲ್ಲಿ ಅತೃಪ್ತಿಗೆ ಆಸ್ಪದ ಕೊಡಬಾರದು ಎಂದು ಎಐಸಿಸಿ ವರಿಷ್ಠರು ನಿರ್ದೇಶನ ನೀಡಿದ್ದಾರೆ ಎನ್ನಲಾಗಿದೆ.

ಈ ಹಿನ್ನೆಲೆಯಲ್ಲಿ ಸಿಎಂ, ''ಶಾಸಕರಿಂದ ಕ್ರಿಯಾ ಯೋಜನೆ ಪಡೆದು ಅನುದಾನ ಬಿಡುಗಡೆ ಮಾಡಿ, ಪ್ರಕ್ರಿಯೆ ಮುಗಿಯಬೇಕು. ಜೂನ್ 2ನೇ ವಾರದಿಂದಲೇ ಕಣ್ಣಿಗೆ ಕಾಣುವಂತಹ ಅಭಿವೃದ್ಧಿ ಕೆಲಸಗಳು ಶುರುವಾಗಬೇಕು ಶಾಸಕರ ಅನುದಾನದ ಕೆಲಸಗಳು ಒಳಗೊಂಡು ಎಲ್ಲ ಅಭಿವೃದ್ಧಿ ಕೆಲಸಗಳಿಗೆ ಸಂಬಂಧಿಸಿದಂತೆ ಜೂನ್ ತಿಂಗಳೊಳಗೆ ಟೆಂಡರ್ ಪ್ರಕ್ರಿಯೆ ನಡೆಯಬೇಕು. ಇಲ್ಲವಾದರೆ ಸಂಬಂಧಪಟ್ಟ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು'' ಎಂದು ಸಿಎಂ ಅಧಿಕಾರಿಗಳಿಗೆ ಎಚ್ಚರಿಕೆಯನ್ನೂ ನೀಡಿದರು. ''ಯೋಜನಾ ಇಲಾಖೆಯಲ್ಲಿ ಶೇ.44 ಮಾತ್ರ ವೆಚ್ಚವಾಗಿದ್ದು, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ನಿಧಿಯ ವೆಚ್ಚದಲ್ಲಿ ಪ್ರಗತಿ ಕುಂಠಿತವಾಗಿದೆ. ಶಾಸಕರ ಅನುದಾನ ಬಹಳ ವರ್ಷಗಳ ಕಾಲ ವೆಚ್ಚವಾಗದಿದ್ದರೆ ವಾಪಸ್ ಪಡೆಯಬೇಕಾಗುತ್ತದೆ. ಅದಕ್ಕೆ ಅವಕಾಶ ಕೊಡದಂತೆ ಕ್ರಿಯಾಯೋಜನೆಗಳನ್ನು ಅನುಮೋದಿಸಿ,'' ಎಂದು ಸೂಚಿಸಿದರು.

**ಅನುದಾನ ಸದ್ಬಳಕೆಗೆ ಸೂಚನೆ**

''ಕೇಂದ್ರದ ನೆರವಿನ ಯೋಜನೆಗಳಿಗೆ ಸಂಬಂಧಿಸಿದಂತೆ ಬಳಕೆ ಪ್ರಮಾಣ ಪತ್ರವನ್ನು ಸಕಾಲಕ್ಕೆ ಕಳಿಸದಿದ್ದರೆ ಕೇಂದ್ರದಿಂದ ಮುಂದಿನ ಕಂತು ಬಿಡುಗಡೆಯಾಗುವುದಿಲ್ಲ. ಹಾಗಾಗಿ ಚುನಾವಣಾ ಆಯೋಗದಿಂದ ಟೆಂಡರ್ ಕರೆಯಲು ಅನುಮತಿ ನೀಡಲಾಗಿದ್ದು, ಮುಂದಿನ ಸಭೆ ನಡೆಯುವುದರೊಳಗೆ ಪ್ರಕ್ರಿಯೆ ಶುರುವಾಗಬೇಕು. ಈ ಬಗ್ಗೆ ಆದ್ಯತೆ ಮೇಲೆ ಕ್ರಮ ವಹಿಸಿ. ಜೂನ್ ಅಂತ್ಯದೊಳಗೆ ಕೇಂದ್ರದ ಯೋಜನೆಗಳಿಗೆ ಸಂಬಂಧಿಸಿದ ಅನುದಾನದ ಮೊದಲ ಕಂತು ಬಿಡುಗಡೆ ಮಾಡಿಸಿಕೊಳ್ಳಲು ಕ್ರಮ ವಹಿಸಬೇಕು,'' ಎಂದು ಸಿಎಂ ನಿರ್ದೇಶನ ನೀಡಿದರು.

## ಬಿತ್ತನೆಗೆ ಸಿದ್ಧತೆ ಪೂರ್ಣಗೊಳಿಸಿ

ಈ ಸಲ ಉತ್ತಮ ಮುಂಗಾರು ಮಳೆಗಾಲದ ನಿರೀಕ್ಷೆಯಿದ್ದು, ರೈತರಿಗೆ ಸಕಾಲಕ್ಕೆ ಬಿತ್ತನೆ ಬೀಜ, ಗೊಬ್ಬರ ಸಿಗುವಂತೆ ಪೂರ್ಣ ಸಿದ್ಧತೆ ಮಾಡಿಕೊಳ್ಳಿ, ಮುಂಗಾರು ಆರಂಭವಾಗುವ ವರೆಗೆ ಬರ ಪರಿಸ್ಥಿತಿಯನ್ನು ಎಚ್ಚರಿಕೆಯಿಂದ ನಿಭಾಯಿಸುವಂತೆ ಅಧಿಕಾರಿಗಳಿಗೆ ಸಿಎಂ ಸೂಚಿಸಿದ್ದಾರೆ.

ಬಿತ್ತನೆ ಮಾಡಿದ ಬೀಜ ಮೊಳಕೆಯೊಡೆಯದೆ ಒಣಗಿಹೋಗಿರುವ ಪ್ರಕರಣಗಳಲ್ಲೂ ಬೆಳೆ ನಷ್ಟ ಪರಿಹಾರಕ್ಕೆ ಪರಿಗಣಿಸುವ ಬಗ್ಗೆ ಎನ್‌ಡಿಆರ್‌ಎಫ್ ಮಾರ್ಗಸೂಚಿಯಲ್ಲಿ ಬದಲಾವಣೆ ಮಾಡುವ ಬಗ್ಗೆ ಸಂಪುಟದ ಉಪಸಮಿತಿಯಲ್ಲಿ ಚರ್ಚಿಸಿ ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ.

**ಅಧಿಕಾರಿಗಳು ನೀಡಿದ ವಿವರ**

**ಗೊಬ್ಬರ ದಾಸ್ತಾನು: ಕೃಷಿ ಇಲಾಖೆ**

ಜೂನ್ ಮೊದಲ ವಾರದಲ್ಲಿ ಕರ್ನಾಟಕಕ್ಕೆ ಮುಂಗಾರು ಪ್ರವೇಶಿಸಲಿದ್ದು, 53,500 ಕ್ವಿಂಟಾಲ್ ಬಿತ್ತನೆ ಬೀಜ ಅಗತ್ಯವನ್ನು ಅಂದಾಜಿಸಿ ಎಲ್ಲ ಜಿಲ್ಲೆಗಳಲ್ಲೂ ದಾಸ್ತಾನು ಮಾಡಲಾಗಿದೆ. 26 ಲಕ್ಷ ಮೆಟ್ರಿಕ್ ಟನ್ ಗೊಬ್ಬರ ಅಗತ್ಯವಿದ್ದು, ಸದ್ಯ 15 ಲಕ್ಷ ಟನ್ ಲಭ್ಯವಿದೆ.

**ಬೆಳೆ ಪರಿಹಾರ: ಕಂದಾಯ ಇಲಾಖೆ**

ಒಟ್ಟು 33.50 ಲಕ್ಷ ರೈತರಿಗೆ ಬೆಳೆ ಹಾನಿ ಪರಿಹಾರ ನೀಡಲಾಗಿದ್ದು, ಉಳಿದ ರೈತರ ಬ್ಯಾಂಕ್ ಖಾತೆಗಳಿಗೆ ಪರಿಹಾರ ಜಮಾ ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಸುಮಾರು 20.13 ಲಕ್ಷ ರೈತ ಕುಟುಂಬಗಳಿಗೆ ತಲಾ 2,400 ರೂ. ನಂತೆ ಒಟ್ಟು 476.40 ಕೋಟಿ ರೂ. ಜೀವನೋಪಾಯ ನಷ್ಟ ಪರಿಹಾರ ನೀಡಲಾಗಿದೆ.

**ಡಿಸಿಎಂ ಸೂಚನೆ**

''ಬೆಂಗಳೂರು ನಗರದಲ್ಲಿ 6,900 ಕೊಳವೆಬಾವಿಗಳು ಬತ್ತಿಹೋಗಿವೆ. ಕೆರೆಗಳೂ ಒಣಗಿವೆ. ಸಂಸ್ಕರಿಸಿದ ನೀರನ್ನು ಕೆರೆಗಳಿಗೆ ತುಂಬಿಸಲು ಕ್ರಮ ಕೈಗೊಳ್ಳಬೇಕು. ಮಳೆ ನೀರು ಕೆರೆಗಳಿಗೆ ಸುಗಮವಾಗಿ ಹರಿದುಹೋಗುವ ವ್ಯವಸ್ಥೆ ಆಗಬೇಕು'' ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು.

**ನೀರಿನ ಬಗ್ಗೆ ಎಚ್ಚರ ವಹಿಸಿ**

ರಾಜ್ಯದ 2,207 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ಬಹುತೇಕ ಕಡೆ ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆದು ನೀರು ಪೂರೈಸಲಾಗುತ್ತಿದೆ. ಸಾಧ್ಯವಾಗದ ಕಡೆಗಳಲ್ಲಿ ಟ್ಯಾಂಕರ್‌ನಲ್ಲಿ ನೀರು ಪೂರೈಸಲಾಗುತ್ತಿದೆ. ನಗರ ಮತ್ತು ಗ್ರಾಮೀಣದಲ್ಲಿ ಎಲ್ಲಿಯೂ ನೀರಿನ ತೊಂದರೆ ಆಗದಂತೆ ಎಚ್ಚರ ವಹಿಸಬೇಕು. ಗೋಶಾಲೆಗಳನ್ನು ತೆರೆಯಬೇಕು. ಬರಗಾಲಕ್ಕೆ ಸಂಬಂಧಿಸಿದಂತೆ ವೀಡಿಯೋ ಸಂವಾದ ಮಾಡಲು ಅವಕಾಶವಿದೆ ಎಂದು ಸಿಎಂ ಸೂಚಿಸಿದರು.

**ಕೆರೆಗಳ ಪುನಃಶ್ಚೇತನ: ನೀರಾವರಿ ಇಲಾಖೆ**

ಬರಪೀಡಿತ ಹಾಗೂ ಮಳೆಯಾಶ್ರಿತ ಪ್ರದೇಶಗಳಲ್ಲಿ 7,421 ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಲಾಗಿದ್ದು, 56,000 ಕೃಷಿ ಹೊಂಡಗಳನ್ನು ಈ ವರ್ಷ ನಿರ್ಮಾಣ ಮಾಡಲಾಗುವುದು. ರಾಜ್ಯದ 33,000 ಕೆರೆಗಳ ಪೈಕಿ, 13 ಸಾವಿರ ಕೆರೆಗಳನ್ನು ಮನರೇಗಾದಡಿ ಪುನಃಶ್ಚೇತನ ಮಾಡಲಾಗುತ್ತಿದೆ.

## ವಿಧಾನಸೌಧಕ್ಕೆ ಆನ್‌ಲೈನ್ ಪಾಸ್

■ **ವಿಕ ಸುದ್ದಿಲೋಕ** ಬೆಂಗಳೂರು

ಸಾರ್ವಜನಿಕರಿಗೆ ಇನ್ನು ಮುಂದೆ ಆನ್‌ಲೈನ್ ಮೂಲಕ ವಿಧಾನಸೌಧ ಪ್ರವೇಶದ ಪಾಸ್ ವಿತರಿಸಲಾಗುತ್ತದೆ. ಪಾಸ್ ಮತ್ತು ಗುರುತಿನ ಚೀಟಿಗಳನ್ನು ಪರಿಶೀಲಿಸಿದ ನಂತರವಷ್ಟೇ ವಿಧಾನ ಸೌಧ ಪ್ರವೇಶಕ್ಕೆ ಅವಕಾಶ ನೀಡಲಾಗುತ್ತದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ತಿಳಿಸಿದರು.

ವಿಧಾನಸೌಧದ ಪ್ರವೇಶ ದ್ವಾರಗಳಲ್ಲಿ ಹೊಸದಾಗಿ ಅಳವಡಿಸಿರುವ ಲೋಹ ಶೋಧಕ (ಮೆಟಲ್ ಡಿಟೆಕ್ಟರ್) ಹಾಗೂ ಬ್ಯಾಗೇಜ್ ಸ್ಕ್ಯಾನರ್‌ಗಳನ್ನು ಶುಕ್ರವಾರ ಪರಿಶೀಲಿಸಿ ಮಾತನಾಡಿದ ಅವರು, ''ಸಾರ್ವಜನಿಕರು ಆನ್‌ಲೈನ್ ಮೂಲಕ ಪಡೆದ ಕ್ಯೂ ಆರ್ ಕೋಡ್‌ನ ಪಾಸ್‌ಗಳನ್ನು ಪೊಲೀಸರು ಪರಿಶೀಲಿಸುತ್ತಾರೆ. ಇನ್ನು ಮುಂದೆ ಸಿಬ್ಬಂದಿಯು ಕೈಯಿಂದ ಪಾಸ್ ವಿತರಿಸುವುದಿಲ್ಲ,'' ಎಂದರು.

''ವಿಧಾನಸೌಧ ಭದ್ರತಾ ವಿಭಾಗದ ವ್ಯಾಪ್ತಿಗೆ ಬರುವ ವಿಧಾನಸೌಧದ 4 ಗೇಟ್, ವಿಕಾಸಸೌಧದ 3 ಗೇಟ್, ಹೈಕೋರ್ಟ್‌ನ 6 ಗೇಟ್, ರಾಜಭವನ ಪ್ರವೇಶದ್ವಾರಗಳಲ್ಲಿ ಹೊಸದಾಗಿ ಗುಣಮಟ್ಟದ ಬ್ಯಾಗೇಜ್ ಸ್ಕ್ಯಾನರ್, ಮೆಟಲ್ ಡಿಟೆಕ್ಟರ್, ಕ್ಯೂಆರ್ ಕೋಡ್ ಯಂತ್ರ ಸೇರಿದಂತೆ ಅತ್ಯಾಧುನಿಕ ಉಪಕರಣಗಳನ್ನು ಭದ್ರತೆಗೆ ಅಳವಡಿಸಲಾಗಿದೆ. ಯಾರಾದರೂ ಅನುಮಾನಾಸ್ಪದ ವಸ್ತುಗಳನ್ನು ತೆಗೆದುಕೊಂಡು ಬಂದರೆ ಈ ಉಪಕರಣಗಳಿಂದ ಸುಲಭವಾಗಿ ಪತ್ತೆ ಹಚ್ಚಬಹುದು,'' ಎಂದು ಹೇಳಿದರು. ''ಈ ಹಿಂದೆ ಅಳವಡಿಸಿದ್ದ ಉಪಕರಣಗಳು ಮೂರು ವರ್ಷಗಳ ಹಿಂದೆಯೇ ಹಾಳಾಗಿದ್ದವು. ಹೀಗಾಗಿ, ಅವುಗಳನ್ನು ಬದಲಿಸಲಾಗಿದೆ. ಸಾರ್ವಜನಿಕರು ಪೂರ್ವ ಭಾಗದ ಗೇಟ್‌ನಿಂದ ವಿಧಾನಸೌಧಕ್ಕೆ ಬರಬೇಕು. ಪಶ್ಚಿಮ ದ್ವಾರದಲ್ಲಿ ಗಣ್ಯರ ಪ್ರವೇಶಕ್ಕೆ ಮಾತ್ರ ಅವಕಾಶ,'' ಎಂದರು.

**ಮತ್ತಷ್ಟು ಭದ್ರತೆ:** ''ವಿಧಾನಸೌಧದ ಭದ್ರತೆಯನ್ನು ಮತ್ತಷ್ಟು ಹೆಚ್ಚಿಸುವ ಸಂಬಂಧ ನಗರ ಪೊಲೀಸ್ ಆಯುಕ್ತರೊಂದಿಗೆ ಚರ್ಚಿಸಲಾಗಿದೆ. ಈಗಾಗಲೇ ಕೆಎಸ್‌ಐಎಸ್‌ಎಫ್ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ. ವಿಧಾನಸೌಧದ ಭದ್ರತೆಯಲ್ಲಿ ಮತ್ತಷ್ಟು ಮಾರ್ಪಾಡು ತರಲಾಗುವುದು. ಅಧಿವೇಶನದ ಸಂದರ್ಭದಲ್ಲಿ ಬೇಕಾಬಿಟ್ಟಿಯಾಗಿ ಜನರನ್ನು ಒಳಗೆ ಬಿಡುವುದಿಲ್ಲ. ಯಾರೋ ಪಾಸ್ ಪಡೆದು ಸಂಸತ್ ಭವನ ಪ್ರವೇಶಿಸಿ, ದಾಂಧಲೆ ಎಬ್ಬಿಸಿದ್ದರು.

ಆಂತರಿಕ ಅಂಕಗಳ ವ್ಯತ್ಯಾಸ ವಿರುದ್ಧ ಮಂಡಳಿಗೆ 51 ಕಾಲೇಜುಗಳ ಪ್ರಾಂಶುಪಾಲರು ಪತ್ರ


## ಪಿಯು ಹೊಸ ಅಂಕ ಪದ್ಧತಿಗೆ ಆತಂಕ

■ **ದೇವರಾಜ್ ಕನಕಪುರ** ಬೆಂಗಳೂರು
devaraj.l@timesgroup.com

ಇದೇ ಪ್ರಥಮ ಬಾರಿಗೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಎಲ್ಲ ವಿಷಯಗಳಿಗೂ ಜಾರಿಗೆ ತಂದ 80:20 ಅಂಕಗಳ ಪದ್ಧತಿಯಿಂದ ಬಹುತೇಕ ವಿದ್ಯಾರ್ಥಿಗಳ ಅಂಕಗಳ ವ್ಯತ್ಯಾಸವಾಗಿದ್ದು, ಅಂಕ ನೀಡುವಂತೆ ಕೋರಿ ವಿದ್ಯಾರ್ಥಿಗಳು ಮತ್ತು ಕಾಲೇಜಿನ ಪ್ರಾಂಶುಪಾಲರು ಮಂಡಳಿ ಮೊರೆ ಹೋಗಿದ್ದಾರೆ.

ಆಂತರಿಕ ಅಂಕಗಳನ್ನು ನಮೂದಿಸುವಾಗ ಸಾಕಷ್ಟು ಪ್ರಮಾದಗಳು ಉಂಟಾಗಿದ್ದು, 17 ಕೊಡುವ ಕಡೆ 7 ಅಂಕಗಳನ್ನು ಮಂಡಳಿ ನೀಡಿದೆ. ಈ ರೀತಿಯ ಹಲವಾರು ಪ್ರಕರಣಗಳು ಕಂಡು ಬಂದಿವೆ. ಇದರಿಂದ ಫಲಿತಾಂಶ ಕಡಿಮೆ ಬಂದಿದ್ದು, ತಕ್ಷಣ ತಪ್ಪುಗಳನ್ನು ಸರಿಪಡಿಸಬೇಕೆಂದು ಕೋರಿ ರಾಜ್ಯದ 51 ಕಾಲೇಜುಗಳ ಪ್ರಾಂಶುಪಾಲರು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಗೆ ಪತ್ರ ಬರೆದಿದ್ದಾರೆ. ಇದರಿಂದ ಸಾವಿರಾರು ವಿದ್ಯಾರ್ಥಿಗಳ ಅಂಕ ಪರಿಷ್ಕರಣೆಯಾಗಬೇಕಿದೆ.

ಆದರೆ, ಇದು ಸಂಪೂರ್ಣ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ವಿಷಯವಾದ್ದರಿಂದ ಇಲಾಖೆಯ ನಿರ್ದೇಶಕರಿಗೆ ಪತ್ರ ಬರೆಯುವಂತೆ ಮಂಡಳಿ ಪೋಷಕರಿಗೆ ಸೂಚಿಸಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸಿದ ಸಿಇಟಿ–24ರ ಫಲಿತಾಂಶ ಇನ್ನೊಂದು ವಾರದಲ್ಲಿ ಬಿಡುಗಡೆಯಾಗುವ ಸಾಧ್ಯತೆ ಹೆಚ್ಚಿದೆ. ಈ ಹಂತದಲ್ಲಿ ಆಂತರಿಕ ಅಂಕಗಳಲ್ಲಿ ತಾರತಮ್ಯ ಎದುರಾಗಿರುವ ವಿದ್ಯಾರ್ಥಿಗಳಿಗೆ ಆತಂಕ ಹೆಚ್ಚಾಗಿದೆ. ಏಕೆಂದರೆ, ಸಿಇಟಿಗೆ ದ್ವಿತೀಯ ಪಿಯುಸಿಯ ಶೇ.50 ಅಂಕಗಳನ್ನು ಪರಿಗಣಿಸಲಾಗುತ್ತದೆ.




ಕೆಇಎ ಫಲಿತಾಂಶ ಪ್ರಕಟಿಸುವಷ್ಟರಲ್ಲಿ ಮಂಡಳಿಯು ಸಮಸ್ಯೆ ಸರಿಪಡಿಸಿದರೆ, ಸಿಇಟಿ ಫಲಿತಾಂಶದಲ್ಲಿ ಉತ್ತಮ ಸ್ಥಾನ ದೊರೆಯಲಿದೆ. ಇಲ್ಲವಾದಲ್ಲಿ, ಕಡಿಮೆ ಸ್ಥಾನವೇ ಗತಿ. ಇದರಿಂದ ತಕ್ಷಣ ಮಂಡಳಿಯು ಸಮಸ್ಯೆ ಬಗೆಹರಿಸಬೇಕೆಂದು ಪೋಷಕರು ಮನವಿ ಮಾಡಿದ್ದಾರೆ.

**ಪ್ರಮಾದವೇನು?:** ಇದೇ ಮೊದಲ ಬಾರಿಗೆ ಶಿಕ್ಷಣ ಇಲಾಖೆಯು ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿನಲ್ಲಿ 80 ಥಿಯರಿ ಮತ್ತು 20 ಆಂತರಿಕ ಅಂಕಗಳನ್ನು ಪರಿಚಯಿಸಿದೆ. ಇಲ್ಲಿಯವರೆಗೆ ಕೇವಲ ವಿಜ್ಞಾನ ವಿಷಯಕ್ಕೆ ಮಾತ್ರ ಈ ಪದ್ಧತಿ ಇತ್ತು. ಈ ಪದ್ಧತಿಯನ್ನು ಕಲಾ ಮತ್ತು ವಾಣಿಜ್ಯ ವಿಷಯಗಳಿಗೂ ವಿಸ್ತರಿಸಿತ್ತು. ಇದರಿಂದ ಬಹುತೇಕ ಕಾಲೇಜುಗಳ ಆಂತರಿಕ ಅಂಕಗಳಲ್ಲಿ ವ್ಯತ್ಯಾಸ ಕಂಡು ಬಂದಿದೆ.


ಆಂತರಿಕ ಅಂಕಗಳನ್ನು ಆಯಾ ಕಾಲೇಜಿನ ಪ್ರಾಂಶುಪಾಲರು ಮಂಡಳಿಯ ಸ್ಯಾಟ್ಸ್‌ಗೆ ಅಪ್‌ಲೋಡ್ ಮಾಡುವಾಗ ಸಿಬ್ಬಂದಿಯಿಂದ ಮಾಡಿಸುತ್ತಾರೆ. ಹೀಗಾಗಿ, ಅಂಕಗಳನ್ನು ನಮೂದಿಸುವಾಗ ವ್ಯತ್ಯಾಸಗಳು ಉಂಟಾಗಿವೆ ಎಂಬ ಆರೋಪವೂ ಕೇಳಿ ಬಂದಿದೆ.

> ನನ್ನ ಮಗನಿಗೆ ಗಣಿತದಲ್ಲಿ 20 ಆಂತರಿಕ ಅಂಕಗಳಿಗೆ 17ರ ಬದಲಿಗೆ 7 ನೀಡಿದ್ದಾರೆ. ಇದು ಕಾಲೇಜು ಹಂತದಲ್ಲಿ ತಪ್ಪಾಗಿದ್ದು, ಸರಿ ಪಡಿಸಲು ಪ್ರಾಂಶುಪಾಲರು ಸಹ ಪಿಯು ಇಲಾಖೆಗೆ ಪತ್ರ ಬರೆದಿದ್ದಾರೆ. ಆದರೆ, ಪಿಯು ಇಲಾಖೆ ಸಮ್ಮತಿಸಿಲ್ಲ.
> **-ಸುರೇಶ್** ಪೋಷಕರು

> ಪ್ರಾಂಶುಪಾಲರೇ ಆಂತರಿಕ ಅಂಕಗಳನ್ನು ಸ್ಯಾಟ್ಸ್‌ನಲ್ಲಿ ಅಪ್‌ಲೋಡ್ ಮಾಡುತ್ತಾರೆ. ಅದನ್ನು ಪಿಯು ಮಂಡಳಿಯೇ ಬದಲು ಮಾಡಬೇಕು.
> **- ಎನ್.ಮಂಜುಶ್ರೀ** ಅಧ್ಯಕ್ಷರು, ರಾಜ್ಯ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ

## ರಾಜ್ಯದಲ್ಲಿ ಮಹಿಳೆಯರು ಮನೆ ಬಿಟ್ಟು ಬರಲಾಗದ ಸ್ಥಿತಿ

**ಬೆಂಗಳೂರು:** ''ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ,'' ಎಂದು ಆಕ್ರೋಶ ವ್ಯಕ್ತಪಡಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಸಿಎಂ ಹಾಗೂ ಗೃಹ ಸಚಿವರ ರಾಜೀನಾಮೆಗೆ ಆಗ್ರಹಿಸಿದ್ದಾರೆ.



ಎಕ್ಸ್ ತಾಣದಲ್ಲಿ ಸಂದೇಶ ಹಂಚಿಕೊಂಡಿರುವ ಅವರು, ''ಸುಭದ್ರತೆಗೆ ಹೆಸರಾಗಿದ್ದ ರಾಜ್ಯವನ್ನು ಕಾಂಗ್ರೆಸ್ ಸರಕಾರ ಕ್ರಿಮಿನಲ್‌ಗಳು, ಕೊಲೆಗಡುಕರ ತಾಣವನ್ನಾಗಿಸುತ್ತಿದೆ. ಗೃಹಲಕ್ಷ್ಮೀ, ಗೃಹಜ್ಯೋತಿ ಯೋಜನೆಗಳನ್ನು ಜಾರಿಗೊಳಿಸಿರುವುದಾಗಿ ಬೀಗುವ ಕಾಂಗ್ರೆಸ್ ಸರಕಾರದ ಆಡಳಿತದಲ್ಲಿ ಹಾಡಹಗಲೇ ಅಮಾಯಕ ಹೆಣ್ಣು ಮಕ್ಕಳ ಬರ್ಬರ ಹತ್ಯೆಯಾಗುತ್ತಿದೆ. ಮನೆಗಳಿಗೆ ನುಗ್ಗಿ ಗೃಹಲಕ್ಷ್ಮೀ ಅವರನ್ನು ಚಾಕುವಿನಿಂದ ಕೊಲ್ಲಲಾಗುತ್ತಿದೆ. ಭಾಗ್ಯಲಕ್ಷ್ಮೀ ಅವರನ್ನು ಕಳೆದುಕೊಂಡ ಹೆತ್ತವರ ಆಕ್ರಂದನ ಅರಣ್ಯ ರೋಧನವಾಗುತ್ತಿದೆ,'' ಎಂದು ಕಿಡಿ ಕಾರಿದ್ದಾರೆ.

''ರಾಜ್ಯಾದ್ಯಂತ ಹೆಣ್ಣು ಮಕ್ಕಳ ಸರಣಿ ಕೊಲೆ, ಅನುಮಾನಾಸ್ಪದ ಸಾವು, ಲೈಂಗಿಕ ದೌರ್ಜನ್ಯ ಪ್ರಕರಣಗಳೇ ಹೆಚ್ಚಾಗುತ್ತಿದ್ದು ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದು ಬಿದ್ದಿದೆ.

ಕೆಲ ದಿನಗಳ ಹಿಂದೆ ಹುಬ್ಬಳ್ಳಿಯ ನೇಹಾ ಹತ್ಯೆ, ಮಡಿಕೇರಿಯಲ್ಲಿ ಮೀನಾಳ ರುಂಡ ಕತ್ತರಿಸಿ ಕೊಲೆ, ಮತ್ತೆ ಹುಬ್ಬಳ್ಳಿಯಲ್ಲಿ ಅಂಜಲಿ ಕೊಲೆ, ಬೆಂಗಳೂರಿನ ಪದವಿ ವಿದ್ಯಾರ್ಥಿನಿ ಪ್ರಬುದ್ಧ ಕೊಲೆಯಾದ ಸ್ಥಿತಿಯಲ್ಲಿ ಪತ್ತೆಯಾಗಿರುವುದೂ ಸೇರಿದಂತೆ ನಿರಂತರ ಕೊಲೆ ಪ್ರಕರಣಗಳು ವರದಿಯಾಗುತ್ತಲೇ ಇವೆ,'' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

''ಸದ್ಯದ ಪರಿಸ್ಥಿತಿಯಲ್ಲಿ ಮಹಿಳೆಯರು, ವಿದ್ಯಾರ್ಥಿನಿಯರು ಮನೆಯಿಂದ ಹೊರಬರಲು ಭಯಪಡುವ ವಾತಾವರಣ ನಿರ್ಮಾಣಗೊಂಡಿದೆ. ಹಂತಕರಿಗೆ ಯಾರ ಭಯವೂ ಇಲ್ಲದಂತಾಗಿದ್ದು ಸಾಮಾಜಿಕ ಭದ್ರತೆ ಕಲ್ಪಿಸಿ ಜನರಿಗೆ ಅಭಯ ತುಂಬಬೇಕಾದ ಗೃಹ ಇಲಾಖೆ ಈ ನಿಟ್ಟಿನಲ್ಲಿ ಯಾವುದೇ ಕ್ರಮ ವಹಿಸದೆ ಜನರ ವಿಶ್ವಾಸ ಕಳೆದುಕೊಂಡಿದೆ,'' ಎಂದು ಆರೋಪಿಸಿದ್ದಾರೆ.

**ಗೂಂಡಾ ರಾಜ್ಯದ ಆತಂಕ: ಶೆಟ್ಟರ್**

**ಹುಬ್ಬಳ್ಳಿ:** ಮೊದಲಿದ್ದ ಉತ್ತರ ಪ್ರದೇಶ ಮಾದರಿಯಲ್ಲಿ ಕರ್ನಾಟಕವೂ ಗೂಂಡಾ ರಾಜ್ಯವಾಗುತ್ತಿದೆ ಎಂದು ಮಾಜಿ ಸಿಎಂ ಜಗದೀಶ ಶೆಟ್ಟರ್ ಆರೋಪಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ''ಉತ್ತರ ಪ್ರದೇಶ ಮೊದಲು ಗೂಂಡಾ ರಾಜ್ಯವಾಗಿತ್ತು. ಅಲ್ಲಿ ಯೋಗಿ ಆದಿತ್ಯನಾಥ ಸಿಎಂ ಆದ ನಂತರ ಶಾಂತಿ ನೆಲೆಸಿದೆ. ಅಂತಹ ದಿಟ್ಟ ನಿರ್ಧಾರವನ್ನು ರಾಜ್ಯದ ಸಿಎಂ ಏಕೆ ತೆಗೆದುಕೊಳ್ಳುತ್ತಿಲ್ಲ'' ಎಂದು ಪ್ರಶ್ನಿಸಿದರು. ''ನೇಹಾ ಕೊಲೆಯಾದಾಗ ಗೃಹ ಸಚಿವರು ಸಭೆ ನಡೆಸಿ ಅಧಿಕಾರಿಗಳ ಕಾರ್ಯವೈಖರಿ ಪರಿಶೀಲನೆ ಮಾಡಬೇಕಿತ್ತು. ಆದರೆ ನಿರ್ಲಕ್ಷ್ಯ ಮಾಡಿದರು. ಜೀವ ಬೆದರಿಕೆ ಇರುವ ಬಗ್ಗೆ ಠಾಣೆಗೆ ಹೋಗಿ ದೂರು ಕೊಟ್ಟಿದ್ದರು. ಆದರೆ ಪೊಲೀಸರು ನಿರ್ಲಕ್ಷ್ಯ ವಹಿಸದೆ ತನಿಖೆ ನಡೆಸಿದ್ದರೆ ಘಟನೆ ನಡೆಯುತ್ತಿರಲಿಲ್ಲ'' ಎಂದರು.

# ಅಪಾಯಕಾರಿ ಆಗಿದೆ ಆಗುಂಬೆ ಪ್ರಯಾಣ

**ಮುಂಗಾರಿಗೆ ಸಿದ್ಧವಾಗದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ | ಚರಂಡಿ ಸ್ವಚ್ಛಗೊಳಿಸುವುದಕ್ಕೆ ಮೀನಮೇಷ**

■ **ಆತೀಶ್ ಬಿ. ಕನ್ನಾಳೆ** ಶಿವಮೊಗ್ಗ
aatish.kannale@timesgroup.com

ವಿಕ REALITY CHECK

ಆಗುಂಬೆ ಘಾಟಿ ಪ್ರಕೃತಿ ಸೌಂದರ್ಯದ ತಾಣವಷ್ಟೇ ಅಲ್ಲ, ಶಿವಮೊಗ್ಗ ಮತ್ತು ಮಂಗಳೂರು ನಡುವಿನ ಸಂಪರ್ಕದ ಕೊಂಡಿಯೂ ಆಗಿದೆ. ಆದರೆ, ಈ ರಾಷ್ಟ್ರೀಯ ಹೆದ್ದಾರಿ ಸಮಸ್ಯೆಗಳ ಕೂಪವಾಗಿ ಮಾರ್ಪಟ್ಟಿದೆ.

ಒಟ್ಟು 14 ಹೇರ್‌ಪಿನ್ ಕರ್ವ್‌ಗಳನ್ನು ಹೊಂದಿರುವ ಆಗುಂಬೆ ಘಾಟಿಯ 10ರಿಂದ 11 ಕಿ.ಮೀ. ರಸ್ತೆ ಮಳೆಗಾಲದಲ್ಲಿ ಪ್ರಯಾಣಿಕರಿಗೆ ಅಷ್ಟು ಸುರಕ್ಷಿತವಲ್ಲ, ನಿರಂತರ ಕುಸಿತ, ಗಿಡ ಮರಗಳು ರಸ್ತೆಯ ಮೇಲೆ ಬಿದ್ದು ಸಂಚಾರಕ್ಕೆ ಅಡೆತಡೆ ಸೃಷ್ಟಿಯಾಗುತ್ತಲೇ ಇದೆ. ರಸ್ತೆ ಬಿರುಕು ಬಿಟ್ಟಾಗ ಅದರ ದುರಸ್ತಿಗೆ ಕಾಲಾವಕಾಶ ಬೇಕಾಗಿರುವುದರಿಂದ ಈ ಅವಧಿಯಲ್ಲಿ ವಾಹನ ಸವಾರರು ಪರದಾಡುತ್ತಾರೆ. ಇಲ್ಲಿ ಕಾರು, ಬಸ್, ಲಾರಿಗಳು ತಡೆಗೋಡೆಗೆ ಗುದ್ದಿ ಮಗುಚಿ ಬೀಳುವುದು ಸರ್ವೆ ಸಾಮಾನ್ಯವಾಗಿ ಬಿಟ್ಟಿದೆ. ಅಂತಹ ಪರಿಸ್ಥಿತಿಯಲ್ಲಿ ಸಂಚಾರದಟ್ಟಣೆ ಉಂಟಾಗುತ್ತದೆ. ಘಾಟಿ ಪ್ರವೇಶಿಸಿ ಮುನ್ನಡೆದ ಮೇಲೆ ಮೊಬೈಲ್‌ಗಳಿಗೆ ನೆಟ್‌ವರ್ಕ್ ಸಿಗುವುದು ಅನುಮಾನ. ಯಾವುದೇ ತುರ್ತು ಪರಿಸ್ಥಿತಿ ಸೃಷ್ಟಿಯಾದರೆ, ಸಹಾಯಕ್ಕೆ ಬರುವವರೂ ಇಲ್ಲದಂತಾಗುತ್ತದೆ.

**ಇನ್ನೂ ಶುರುವಾಗಿಲ್ಲ ಸ್ವಚ್ಛತೆ:** ಮಳೆಗಾಲದಲ್ಲಿ ಘಾಟಿಯ ಸುರಕ್ಷತೆ ಅಡಗಿರುವುದೇ ಅದರ ನಿರ್ವಹಣೆಯ ಮೇಲೆ. ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಗುತ್ತಿಗೆದಾರರು ವರ್ಷವಿಡೀ ಇದನ್ನು ನಿರ್ವಹಿಸುತ್ತಲೇ ಇರಬೇಕು. ಆದರೆ, ವಾಸ್ತವದಲ್ಲಿ ಈ ನಿಯಮಗಳನ್ನು ಅನುಸರಿಸುತ್ತಿಲ್ಲ, ಒಂದು ವೇಳೆ, ಧಾರಾಕಾರ ಮಳೆ ಸುರಿದರೆ ನೀರು ಚರಂಡಿಯಲ್ಲಿ ಹರಿದುಹೋಗಲಾಗದೇ ಅದು ಹಿಲ್ ಸ್ಲೋಪ್‌ಗೆ ನುಗ್ಗಿದರೆ ಕುಸಿತವಾಗುತ್ತದೆ. ಈ ಚರಂಡಿಯನ್ನು ಸ್ವಚ್ಛಗೊಳಿಸುವ ಕಾರ್ಯಕ್ಕೆ ಯಾವುದೇ ಕಾರಣಕ್ಕೂ ಯಂತ್ರಗಳನ್ನು ಬಳಸಬಾರದು. ಹಾಗೊಮ್ಮೆ ಬಳಸಿದರೆ ಗುಡ್ಡ ಕುಸಿತವಾಗುತ್ತದೆ.

**ತಡೆಗೋಡೆ ನಿರ್ವಹಣೆಯೇ ಸವಾಲು:** ಆಗುಂಬೆ ಘಾಟಿಯ 10ನೇ ತಿರುವಿನಲ್ಲಿ ಕಳೆದ ಒಂದೆರಡು ತಿಂಗಳಲ್ಲೇ 10–11 ಸಲ ವಾಹನಗಳು ಗೋಡೆಗೆ ಡಿಕ್ಕಿ ಹೊಡೆದಿವೆ. ಇದನ್ನು ಪದೇಪದೆ ರಿಪೇರಿ ಮಾಡುವುದೇ ಗುತ್ತಿಗೆದಾರರಿಗೆ ಹೊರೆಯಾಗಿ ಪರಿಣಮಿಸಿದೆ. ಅದಕ್ಕೆ ನೇರ ಕಾರಣ ದೊಡ್ಡ ವಾಹನಗಳನ್ನು ಘಾಟಿ ಪ್ರವೇಶಿಸಲು ಬಿಡುತ್ತಿರುವುದು ಎಂಬ ಆರೋಪಗಳಿವೆ.

**ಚೆಕ್ ಪೋಸ್ಟ್‌ಗಳಲ್ಲಿ ಡೀಲಿಂಗ್:** ಆಗುಂಬೆ ಘಾಟಿಯಲ್ಲಿ ಬೃಹತ್ ವಾಹನಗಳ ಸಂಚಾರಕ್ಕೆ ಅವಕಾಶವಿಲ್ಲ, ಆದರೂ ಚೆಕ್ ಪೋಸ್ಟ್‌ಗಳಲ್ಲಿ ಅಂತಹ ವಾಹನಗಳನ್ನು ರಾತ್ರಿ ಹೊತ್ತಿನಲ್ಲಿ ಬಿಡಲಾಗುತ್ತಿದೆ ಎಂಬ ಗಂಭೀರ ಆರೋಪವಿದೆ. ಘಾಟಿಯ ಹತ್ತನೇ ಕ್ರಾಸ್‌ನಲ್ಲಿ ಕಳೆದ ಕೆಲ ತಿಂಗಳಲ್ಲಿ ಹತ್ತಕ್ಕೂ ಹೆಚ್ಚು ಸಲ ತಡೆಗೋಡೆ ಉರುಳಿದೆ. ಬೃಹತ್ ವಾಹನಗಳು ಪದೇಪದೆ ಗುದ್ದುತ್ತಿರುವುದರಿಂದ ಗುತ್ತಿಗೆದಾರರಿಗೂ ನಿರ್ವಹಣೆ ದುಬಾರಿಯಾಗುತ್ತಿದೆ. ತಡೆಗೋಡೆ ಉರುಳುತ್ತಿರುವುದರಿಂದ ಹೆಬ್ರಿ ಪೊಲೀಸ್ ಠಾಣೆಗೆ ಮಾಹಿತಿ ನೀಡಲಾಗಿದೆ. ಹೀಗಾಗಿ, ಜಖಂಗೊಳಿಸುವ ವಾಹನ ಮಾಲೀಕರೇ ಅದರ ವೆಚ್ಚ ಭರಿಸುವ ನಿಟ್ಟಿನಲ್ಲೂ ಕ್ರಮ ವಹಿಸಲಾಗುತ್ತಿದೆ ಎಂದು ಮೂಲಗಳು 'ವಿಜಯ ಕರ್ನಾಟಕ'ಕ್ಕೆ ತಿಳಿಸಿವೆ.



ಘಾಟಿ ರಸ್ತೆಯಲ್ಲಿ ಬೃಹತ್ ವಾಹನ ಸಂಚಾರ


ಆಗುಂಬೆ ಘಾಟಿಯ ತಡೆಗೋಡೆ ಜಖಂ

> ಆಗುಂಬೆ ಘಾಟಿ ನಿರ್ವಹಣೆ ನಿರಂತರವಾಗಿ ಮಾಡಲಾಗುತ್ತಿದೆ. ಕಳೆದ ಮೂರು ತಿಂಗಳಲ್ಲೇ ಮೂರ್‍ನಾಲ್ಕು ಸಲ ವಾಹನಗಳು ಗುದ್ದಿ ತಡೆಗೋಡೆ ಹಾಳಾಗಿತ್ತು. ಅದನ್ನು ಪುನರ್‌ನಿರ್ಮಾಣ ಮಾಡಲಾಗಿದೆ. ಮಳೆಗಾಲಕ್ಕೂ ಮುನ್ನ ಚರಂಡಿ ಸ್ವಚ್ಛತೆ ಮಾಡಲಾಗುವುದು.
> **- ಕೆ.ವಿ. ಮಂಜುನಾಥ್** ಎಇಇ, ರಾಷ್ಟ್ರೀಯ ಹೆದ್ದಾರಿ ಉಪ ವಿಭಾಗ, ಶೃಂಗೇರಿ

**ಪರ್ಯಾಯ ಮಾರ್ಗ**

- ಶಿವಮೊಗ್ಗ, ತೀರ್ಥಹಳ್ಳಿ, ಕೊಪ್ಪ ಶೃಂಗೇರಿ, ಮಾಳಾಘಾಟ್, ಕಾರ್ಕಳ, ಉಡುಪಿ.
- ಶಿವಮೊಗ್ಗ, ಆಯನೂರು, ರಿಪ್ಪನ್ ಪೇಟೆ, ಹೊಸನಗರ, ನಗರ, ಹುಲಿಕಲ್ ಘಾಟಿ, ಸಿದ್ದಾಪುರ, ಕುಂದಾಪುರ
- ತೀರ್ಥಹಳ್ಳಿ, ಯಡೂರು, ಮಾಸ್ತಿಕಟ್ಟೆ, ನಗರ, ಹುಲಿಕಲ್ ಘಾಟಿ, ಸಿದ್ದಾಪುರ, ಕುಂದಾಪುರ

**ಪ್ರಸ್ತುತ ಮಾರ್ಗ**

- ಶಿವಮೊಗ್ಗ, ತೀರ್ಥಹಳ್ಳಿ, ಆಗುಂಬೆ, ಮಣಿಪಾಲ, ಉಡುಪಿ, ಮಂಗಳೂರು.

## ಸ್ಟೇಟ್ ನ್ಯೂಸ್

### ಮಹಾರಾಷ್ಟ್ರದಲ್ಲಿ ಜಮೀರ್ ಪ್ರಚಾರ



**ಬೆಂಗಳೂರು:** ಮಹಾರಾಷ್ಟ್ರದಲ್ಲಿ ಲೋಕಸಭಾ ಚುನಾವಣಾ ಪ್ರಚಾರದಲ್ಲಿ ನಿರತರಾಗಿರುವ ಸಚಿವ ಜಮೀರ್ ಅಹಮದ್ ಖಾನ್ ಶುಕ್ರವಾರ ಮುಂಬಯಿ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಬಿರುಸಿನ ಪ್ರಚಾರ ನಡೆಸಿದರು. ಕಾಂಗ್ರೆಸ್ ಅಭ್ಯರ್ಥಿ ವರ್ಷಾ ಏಕನಾಥ್ ಗಾಯಕ್ವಾಡ್ ಜತೆಗೂಡಿ ಅಂಧೇರಿ ಈಸ್ಟ್, ಸಹಾರ್‌ಗಾವ್, ಮರೋಲ್ ಪೈಪ್‌ಲೈನ್, ಚಕಾಲಾ, ಜೆ.ಬಿ.ನಗರ ವ್ಯಾಪ್ತಿಯಲ್ಲಿ ರೋಡ್ ಶೋ ನಡೆಸಿ ಮತ ಯಾಚಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಜಮೀರ್ ಅಹಮದ್ ಖಾನ್, ''ದೇಶದಲ್ಲಿ ಬದಲಾವಣೆ ಸಮಯ ಬಂದಿದೆ. ಮೋದಿ ನೇತೃತ್ವದ ಕೇಂದ್ರ ಸರಕಾರದ 10 ವರ್ಷಗಳ ಆಡಳಿತದ ವಿರುದ್ಧ ಜನ ಆಕ್ರೋಶಗೊಂಡಿದ್ದಾರೆ. ದೇಶ ಹಾಗೂ ಸಂವಿಧಾನ ರಕ್ಷಣೆಗಾಗಿ 'ಐಎನ್‌ಡಿಐಎ' ಮೈತ್ರಿಕೂಟವನ್ನು ಗೆಲ್ಲಿಸಬೇಕಿದೆ,'' ಎಂದು ಹೇಳಿದರು. ಇದೇವೇಳೆ ಅಭ್ಯರ್ಥಿ ಜತೆಗೆ ಅಂಧೇರಿಯಲ್ಲಿರುವ ಶಿವಸೇನೆ ಕಚೇರಿಗೂ ಜಮೀರ್ ಭೇಟಿ ನೀಡಿದ್ದರು. ಪಾಲಿಕೆ ಸದಸ್ಯ ವಿನ್ನಿ ಡಿಸೋಜಾ ಇತರರು ಪಾಲ್ಗೊಂಡಿದ್ದರು. ಕಾಂಗ್ರೆಸ್‌ನ ಸ್ಟಾರ್ ಪ್ರಚಾರಕರಾದ ಜಮೀರ್ ಅಹಮದ್ ಖಾನ್ ಅವರು ಕೇರಳ, ತೆಲಂಗಾಣ ನಂತರ ಈಗ ಮಹಾರಾಷ್ಟ್ರದಲ್ಲಿ ಮೂರು ದಿನ ಪ್ರವಾಸ ಕೈಗೊಂಡಿದ್ದಾರೆ.

### ಮೇಲ್ಮನೆ ಕಣದಲ್ಲಿ 76 ಅಭ್ಯರ್ಥಿಗಳು

**ಬೆಂಗಳೂರು:** ವಿಧಾನ ಪರಿಷತ್‌ನ 6 ಸ್ಥಾನಗಳಿಗೆ ನಡೆಯಲಿರುವ ಚುನಾವಣೆಗೆ ಸಲ್ಲಿಕೆಯಾದ ನಾಮಪತ್ರಗಳ ಪರಿಶೀಲನೆ ಪ್ರಕ್ರಿಯೆ ಶುಕ್ರವಾರ ನಡೆದಿದ್ದು, ಈ ಪೈಕಿ 5 ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ 76 ನಾಮಪತ್ರಗಳು ಮಾನ್ಯವಾಗಿವೆ. 19 ನಾಮಪತ್ರಗಳು ತಿರಸ್ಕೃತಗೊಂಡಿವೆ. ಆಗ್ನೇಯ ಶಿಕ್ಷಕರ ಕ್ಷೇತ್ರದ ನಾಮಪತ್ರಗಳ ಪರಿಶೀಲನೆ ಪ್ರಕ್ರಿಯೆ ಶನಿವಾರ ನಡೆಯಲಿದೆ. ಒಟ್ಟು 103 ಅಭ್ಯರ್ಥಿಗಳಿಂದ 156 ನಾಮಪತ್ರಗಳು ಸಲ್ಲಿಕೆಯಾಗಿತ್ತು. ಈಶಾನ್ಯ ಪದವೀಧರ ಕ್ಷೇತ್ರ– 26, ಬೆಂಗಳೂರು ಪದವೀಧರ ಕ್ಷೇತ್ರ– 16, ನೈರುತ್ಯ ಶಿಕ್ಷಕರ ಕ್ಷೇತ್ರ– 9, ನೈರುತ್ಯ ಪದವೀಧರ ಕ್ಷೇತ್ರ– 12, ದಕ್ಷಿಣ ಶಿಕ್ಷಕರ ಕ್ಷೇತ್ರ– 13 ನಾಮಪತ್ರಗಳು ಅಂಗೀಕೃತಗೊಂಡಿವೆ.

**ಬೆಂಬಲ:** ಮೈಸೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತಾನಾಡಿದ ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಡಾ.ಈ.ಸಿ.ನಿಂಗರಾಜ್‌ಗೌಡ ಅವರು ಮೈತ್ರಿ ಅಭ್ಯರ್ಥಿಯಾದ ಕೆ.ವಿವೇಕಾನಂದ ಅವರಿಗೆ ತಮ್ಮ ಬೆಂಬಲ ಘೋಷಿಸುವ ಮೂಲಕ ಗೊಂದಲಕ್ಕೆ ತೆರೆ ಎಳೆದಿದ್ದಾರೆ.

### ಬಿಜೆಪಿ ಉಸ್ತುವಾರಿಗಳ ನೇಮಕ

ಬೆಂಗಳೂರು: ವಿಧಾನ ಪರಿಷತ್‌ನ 6 ಸ್ಥಾನಗಳಿಗೆ ನಡೆದಿರುವ ದ್ವೈವಾರ್ಷಿಕ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆಲ್ಲಲು ಪ್ರಯತ್ನ ನಡೆಸಿರುವ ಬಿಜೆಪಿ ಕ್ಷೇತ್ರವಾರು ಪ್ರಭಾರಿಗಳನ್ನು ನಿಯೋಜಿಸಿದೆ. ಈಶಾನ್ಯ ಪದವೀಧರ ಕ್ಷೇತ್ರಕ್ಕೆ ಎಂಎಲ್‌ಸಿ ಎನ್.ರವಿಕುಮಾರ್, ನೈರುತ್ಯ ಪದವೀಧರ/ ನೈರುತ್ಯ ಶಿಕ್ಷಕರ ಕ್ಷೇತ್ರಕ್ಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಸುನೀಲ್ ಕುಮಾರ್, ರಾಜ್ಯ ಕಾರ್ಯದರ್ಶಿ ಡಿ.ಎಸ್.ಅರುಣ್ (ಸಹ ಪ್ರಭಾರಿ) ಬೆಂಗಳೂರು ಪದವೀಧರ ಕ್ಷೇತ್ರಕ್ಕೆ ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣ, ಆಗ್ನೇಯ ಶಿಕ್ಷಕರ ಕ್ಷೇತ್ರಕ್ಕೆ ಎಂಎಲ್ಸಿ ಕೆ.ಎಸ್. ನವೀನ್, ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ.

### ಖಜಾನೆಯಲ್ಲಿ ಉಳಿದ ಚಿಲ್ಲರೆ ಎಣಿಸುತ್ತಿರುವ ಸಿಎಂ: ಅಶೋಕ್ ಟೀಕೆ

**ಬೆಂಗಳೂರು:** ಹಣವೆಲ್ಲ ಖಾಲಿಯಾಗಿ ಪಾಪರ್ ಆಗಿರುವ ಸರಕಾರ ಖಾಲಿ ಖಜಾನೆಯಲ್ಲಿ ಎಷ್ಟು ಚಿಲ್ಲರೆ ಹಣ ಉಳಿದಿದೆ ಎಂದು ಸಿಎಂ ಸಿದ್ದರಾಮಯ್ಯ ಎಣಿಸುತ್ತಿದ್ದು, ರೈತರ ಸಂಕಷ್ಟಕ್ಕೂ ಮಿಡಿಯದೆ ಸುಮ್ಮನಿದ್ದಾರೆ,'' ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಕುಟುಕಿದ್ದಾರೆ. ''ರಾಜ್ಯದ ಕಾಂಗ್ರೆಸ್ ಸರಕಾರವು ಮನರೇಗಾ ಹಣ, ಪಿಂಚಣಿ ಹಣವನ್ನು ರೈತರ ಸಾಲಕ್ಕೆ ಜಮೆ ಮಾಡಿರುವುದು ಖಂಡನೀಯ. ರೈತರ ಹಣವನ್ನು ಸಾಲಕ್ಕೆ ಜಮೆ ಮಾಡಿಕೊಳ್ಳದಂತೆ ಬ್ಯಾಂಕ್‌ಗಳಿಗೆ ಸೂಚಿಸುವಂತೆ ಸಿಎಂ ಎಲ್ಲ ಜಿಲ್ಲಾಧಿಕಾರಿಗಳಿಗೆ ಆದೇಶಿಸಬೇಕು,'' ಎಂದು ಆಗ್ರಹಿಸಿದ್ದಾರೆ.

### ಪಂಚಾಂಗ

ಕ್ರೋಧಿ ನಾಮ ಸಂವತ್ಸರ
**ಅಯನ:** ಉತ್ತರಾಯಣ.
**ಋತು:** ವಸಂತ. **ಮಾಸ:** ವೈಶಾಖ.
**ಪಕ್ಷ:** ಶುಕ್ಲ. **ಮಳೆ ನಕ್ಷತ್ರ:** ಕೃತ್ತಿಕಾ
**ನಿತ್ಯನಕ್ಷತ್ರ:** ಉತ್ತರ.
**ತಿಥಿ:** ದಶಮಿ. **ಯೋಗ:** ಹರ್ಷಣ.
**ಕರಣ:** ಗರಜ.
**ವಾರ:** ಶನಿವಾರ.

ರಾಹು ಕಾಲ: **ಬೆ. 9.00 - 10.30**
ಗುಳಿಕ ಕಾಲ: **ಬೆ. 6.00-7.30**
ಯಮಗಂಡ ಕಾಲ: **ಮ. 1.30-3.00**
ಸೂರ್ಯ ಉದಯ: **ಬೆ.5.54**
ಸೂರ್ಯ ಅಸ್ತ: **ಸಂ.6.37**

ಕರ್ನಾಟಕ ಸರ್ಕಾರ ಜಿಲ್ಲಾಡಳಿತ ದಾವಣಗೆರೆ
**ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ದಾವಣಗೆರೆ.**
ಕೊಠಡಿ ಸಂಖ್ಯೆ. 46. ಎರಡನೇ ಮಹಡಿ, ಕರೂರು ಕೈಗಾರಿಕಾ ಪ್ರದೇಶ, ಜಿಲ್ಲಾಡಳಿತ ಭವನ. ದಾವಣಗೆರೆ. ಫೋನ್ ನಂಬರ್ 08192–262973
ಇ–ಮೇಲ್:dobcmdavanagere@gmail.com,
ಸಂ/ಹಿಂವಕಇ/ದಾ/ಆಹಾರ ಟೆಂಡರ್/ಸಿಆರ್–166/2023–24. ದಿ: 09.05.2024
**ಟೆಂಡರ್ ಪ್ರಕಟಣೆ**
2024–25 ಮತ್ತು 2025–26ನೇ ಸಾಲಿಗೆ ದಾವಣಗೆರೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ ಆಶ್ರಮ ಶಾಲೆಗಳಿಗೆ ಆಹಾರ ಪದಾರ್ಥಗಳು ಮತ್ತು ಇತರೆ ಸಾಮಗ್ರಿಗಳ ಪೂರೈಕೆಗಾಗಿ ಆಹ್ವಾನಿಸಲಾಗಿರುವ ಇ–ಟೆಂಡರ್‌ಗೆ ಸಂಬಂಧಿಸಿದಂತೆ ತಿದ್ದುಪಡಿ ಪ್ರಕಟಣೆಯನ್ನು ಹೊರಡಿಸಲಾಗಿದ್ದು. ಪ್ರಯುಕ್ತ ಹೆಚ್ಚಿನ ಟೆಂಡರ್‌ನ ಹೆಚ್ಚಿನ ಮಾಹಿತಿಯನ್ನು ಇ–ಪ್ರಕ್ಯೂರ್‌ಮೆಂಟ್‌ನಿಂದ ಪಡೆಯಬಹುದಾಗಿದೆ ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಕಛೇರಿ ದೂರವಾಣಿ ಸಂಖ್ಯೆ: 08192–262973.
ವಾಸಾಇ/ಡಿವಿಜಿ/14/ ಕೆಎಸ್‌ಎಂಸಿಎ/2024–25
ಸಹಿ/– ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ದಾವಣಗೆರೆ

**ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ**
#1, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ. ಹೆಚ್. ಬಿ ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು 560 079, ದೂರವಾಣಿ ಸಂಖ್ಯೆ: +91–80–29619801
ಮಿಂಚ್ ಅಂಚೆ : md.ksmscl@gmail.com
ಸಂಖ್ಯೆ: KSMSCL/DRUGS/RE TND/ZINC SULPHATE/02/2023-24 Dated: 17.05.2024
**ಟೆಂಡರ್ ಪ್ರಕಟಣೆ**
ಉಲ್ಲೇಖ: 1. ಟೆಂಡರ್ ಅಧಿಸೂಚನೆ ಸಂಖ್ಯೆ: KSMSCL/DRUGS/RETND/ZINC SULPHATE/02/2023-24, Dated: 17.05.2024. (IND-0113).
ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ–ಟೆಂಡರ್ ಕರೆಯಲಾಗಿದೆ.
1. ಮಕ್ಕಳ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ZINC SULPHATE ಮಾತ್ರೆಗಳನ್ನು ಖರೀದಿಸಿ ಪೂರೈಸಲು ಮರು ಟೆಂಡರ್ ಆಹ್ವಾನಿಸುವ ಕುರಿತು. (IND-0113)
ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್ ಸೈಟ್ ಮುಖಾಂತರ: https://kppp.karnataka.gov.in ನಲ್ಲಿ ದಿನಾಂಕ: 17.05.2024 ರಿಂದ ಟೆಂಡರ್‌ಗಳ ದಾಸ್ತಾವೇಜುಗಳನ್ನು ಡೌನ್ ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು
DIPR/CP/RO72/AAPL/2024-25
ಕೆ.ಎಸ್.ಎಮ್.ಎಸ್.ಸಿ.ಎಲ್., ಬೆಂಗಳೂರು.

**EMPLOYEES' STATE INSURANCE CORPORATION**
(Ministry of Labour & Employment, Govt of India)
Sub Regional Office
ESIC Para Medical College Building, Sedam Road, Gulbarga - 585 106
Tel: 08472-278478, 278479 - Email: sro-gulbarga@esic.nic.in
Website: www.esic.nic.in
**MBBS/BDS/B.Sc ನರ್ಸಿಂಗ್‌ನಲ್ಲಿ ವಿಮೆ ಮಾಡಿದ ವ್ಯಕ್ತಿಗಳ ವಾರ್ಡ್‌ಗಾಗಿ ಪ್ರವೇಶ ಸೂಚನೆ**
ಈ ದಾಖಲಾತಿ ಸೂಚನೆಯು ESIC ವೈದ್ಯಕೀಯ/ದಂತ/ನರ್ಸಿಂಗ್ ಕಾಲೇಜುಗಳು ಮತ್ತು ESI ಯೋಜನೆ ಯಡಿಯಲ್ಲಿ ಕೆಲವು ಇತರ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ UG ಕೋರ್ಸ್‌ನಲ್ಲಿ (MBBS/BDS/B.Sc ನರ್ಸಿಂಗ್) 'ವಿಮಾದಾರ ವ್ಯಕ್ತಿಗಳ ವಾರ್ಡ್'ಗಳ (IPs) ಪ್ರವೇಶಕ್ಕಾಗಿ ಆಗಿದೆ. ಅರ್ಹತಾ ಮಾನದಂಡಗಳ ಕೆಳಗೆ ಮತ್ತು ಪ್ರವೇಶ ನೀತಿ ಮತ್ತು ಭಾರತ ಸರ್ಕಾರ/ಇಎಸ್‌ಐ ಕಾರ್ಪೊರೇಷನ್ ಅನುಮೋದಿಸಿದ ಕಾರ್ಯ ವಿಧಾನದ ಪ್ರಕಾರ 2024–25ರ ಶೈಕ್ಷಣಿಕ ಅವಧಿಗೆ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (UG)-2024 [NEET (UG)] ಗೆ ಅರ್ಜಿ ಸಲ್ಲಿಸಿದೆ. ವಿವರಗಳು ESIC ವೆಬ್‌ಸೈಟ್ esic.gov.in ನಲ್ಲಿ ಪ್ರವೇಶ ಲಿಂಕ್‌ನಲ್ಲಿ ಲಭ್ಯವಿದೆ.
ವೈದ್ಯಕೀಯ ಶಿಕ್ಷಣ ಕೋಶ,
ESIC ಪ್ರಧಾನಕಛೇರಿ

Published and Printed for the proprietors, Metropolitan Media Company Limited, by R. J. Prakashan at Plot No. 9, KSSIDC Industrial Area, Kaladagi Road, Vidyagiri, Bagalkot – 587 102 Regd. Office: 74/2, Sanjana Plaza, 4th & 5th Floor, Elephant Rock Road, Jayanagara 3rd Block, Bengaluru-560011(Ph: 080-40877666), Editor: Sudarshan Channangihalli. Resident Editor: Iranna M.B.Goudar. responsible for selection of news under PRB Act. © All Rights Reserved. Reproduction in whole or in part without written permission is prohibited.
RNI No. KARKAN/2003/11735
Vol.22, Issue no.133